# ಕಾರ್ತಿಕದಲ್ಲೊಂದು ಪುಷ್ಕರ ಮೇಳ

■ ಚಿತ್ರ– ಲೇಖನ:
**ಹರೀಶ್ ಹಳೆಮನೆ**







ರಾಜಸ್ಥಾನದ ಅಜ್ಮೇರ್‌ನಿಂದ ಹನ್ನೊಂದು ಕಿ.ಮೀ. ದೂರದಲ್ಲಿರುವ 'ಪುಷ್ಕರ' ಪ್ರೇಕ್ಷಣೀಯ ಸ್ಥಳ. ಆಸ್ತಿಕರಿಗೆ ಪವಿತ್ರ ತಾಣವೂ ಆಗಿದೆ. ಅಜ್ಮೇರ್‌ನಿಂದ ಪುಷ್ಕರವನ್ನು 'ನಾಗ ಪರ್ವತ'ವೆಂಬ ಬೆಟ್ಟಗಳ ಸಾಲು ಪ್ರತ್ಯೇಕಿಸುತ್ತದೆ.

'ಪುಷ್ಕರ'ದ ಪ್ರಧಾನ ಆಕರ್ಷಣೆ ಅಲ್ಲಿನ ಸರೋವರ ಹಾಗೂ ಬ್ರಹ್ಮ ದೇವಾಲಯ. ಈ ಸರೋವರವನ್ನು ಸ್ವತಃ ಬ್ರಹ್ಮನೇ ನಿರ್ಮಿಸಿದನೆಂದು ಪುರಾಣ ಕಥೆಗಳು ಹೇಳುತ್ತವೆ. ವಿಶಾಲವಾಗಿರುವ ಈ ಸರೋವರ ಆಸ್ತಿಕರ ಮಟ್ಟಿಗೆ ಮಾನಸ ಸರೋವರ. ಈ ಸರೋವರದ ಮೂರು ಪಾರ್ಶ್ವಗಳಲ್ಲಿ ಬೆಟ್ಟಗಳಿವೆ. ಸರೋವರದ ಸುತ್ತಲೂ ನಿರ್ಮಿಸಿರುವ ಘಾಟ್‌ಗಳಲ್ಲಿ ಪವಿತ್ರ ಸ್ನಾನವನ್ನು ಮಾಡುವವರೂ ಇದ್ದಾರೆ.

ಪುಷ್ಕರದಲ್ಲಿ ಒಟ್ಟು ಸುಮಾರು ನಾಲ್ಕು ನೂರಕ್ಕೂ ಹೆಚ್ಚು ದೇವಾಲಯಗಳಿವೆಯೆಂದು ಅಂದಾಜಿಸಲಾಗುತ್ತದೆ. ಅವುಗಳಲ್ಲಿ ಪ್ರಸಿದ್ಧವಾದುದು ಬ್ರಹ್ಮ ದೇವಾಲಯ. ಇದು ಭಾರತದಲ್ಲಿರುವ ಏಕೈಕ ಬ್ರಹ್ಮ ದೇವಸ್ಥಾನವಾಗಿದೆ. (ವಿಶ್ವದಲ್ಲಿ ಕೆಲವೇ ಕೆಲವು ಬ್ರಹ್ಮದೇವರ